**2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ನಂಜನಗೂಡು**

**ಸಿ.ಸಿ 1795/18** **ಸಿ. ಡಬ್ಲ್ಯೂ: 14**

**ಪಿ. ಡಬ್ಲ್ಯು: 4**

| | |
|---|---|
| ಸಾಕ್ಷಿದಾರರ ಹೆಸರು **ತಂದೆಯ** ಹೆಸರು<br>ವಯಸ್ಸು<br>**ಕೆಲಸ**<br>**ವಾಸ** | **ಶಿವಪ್ರಕಾಶ್**<br>**ಚಿಕ್ಕಣ್ಣ**<br>43 **ವರ್ಷ**<br>ಕೆ.ಎಸ್.ಆರ್.ಟಿ.ಸಿ ಚಾಲಕ<br>**ಕೊಳ್ಳೆಗಾಲ** |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 12.08.2025 |

**ಮುಖ್ಯ ವಿಚಾರಣೆ: ಶ್ರೀ. ಎಪಿಪಿ ವಕೀಲೀರಿಂದ:**

ನನಗೆ ಚಾಸಾ–15 ರವರ ಪರಿಚಯ ಇರುತ್ತದೆ. ನನಗೆ ಆರೋಪಿಯ ಪರಿಚಯ ಇರುತ್ತದೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು. ನಿಪಿ–4 ಕ್ಕೆ ಸುಮಾರು 7 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ–4 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನಮ್ಮ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲು: ಶ್ರೀ. ಎಪಿಪಿ ಯವರಿಂದ**

ದಿಃ20.08.2018 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ−15 ರವರನ್ನು ಬರಮಾಡಿಕೊಂಡು ಕೇಸಿನ ವಿದ್ಯಾಮಾನ ತಿಳಿಸಿ ಪಂಚರಾಗಲು ಕೋರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಒಪ್ಪಿದ ಮೇರೆಗೆ ಆರೋಪಿ ಅಪಘಾತ ಪಡಿಸಿದ ಕೆಎ−10−ಎಫ್−209 ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಬೆಳಗ್ಗೆ 11.00 ಗಂಟೆಯಿಂದ 11.30 ರವರೆಗೆ ನಿಪಿ−4 ರಂತೆ ಮಹಜರ್ ಕ್ರಮ ಜರುಗಿಸಿ ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡು ನಿಪಿ−4 ಅನ್ನು ಓದಿ ಹೇಳಿ ನನ್ನ ಮತ್ತು ಚಾಸಾ−15 ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ−4 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರೂ ಸಹ ಆರೋಪಿ ನಮ್ಮ ಇಲಾಖ ನೌಕರರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ . ಹೇ. ಕೇ. ಸರಿ. ಇದೆ

**2 ನೇ ಕಿ**.ಪ್ರ.ದ. ನ್ಯಾ. ದಂ. ನಂಜನಗೂಡು